ದಿನಾಂಕಃ **28.03.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಆರ್. ವಕೀಲರಿಂದಃ

ದಾವಾ ಸ್ವತ್ತಿನ ಸರ್ವೆ.ನಂಬರ್ ನನಗೆ ಗೊತ್ತಿರುವುದಿಲ್ಲ. ಎನ್.ಗಂಗಪ್ಪರವರ ಹೆಸರಿಗೆ ಆಗಿರುವಂತಹ ಕ್ರಯಪತ್ರಗಳನ್ನು ನಾನು ನೋಡಿರುತ್ತೇನೆ. ಎನ್.ಗಂಗಪ್ಪರವರಿಗೆ ಎರಡು ಕ್ರಯಪತ್ರಗಳು ಆಗಿರುತ್ತವೆ. 1974 ರಲ್ಲಿ 2 ಎಕರೆ 10 ಗುಂಟೆ ಮತ್ತು 1981 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ. 1974 ಮತ್ತು 1981 ರ ಎರಡು ಕ್ರಯಪತ್ರಗಳಲ್ಲಿ ಎನ್.ಗಂಗಪ್ಪರವರು ಗುಡ್ಲಗಂಗಪ್ಪರವರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆ.

2. ದಾವಾ ಸರ್ವೆ.ನಂಬರ್.135/1 ರಲ್ಲಿ ವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. 1974 ಮತ್ತು 1981 ರಲ್ಲಿ ಎನ್.ಗಂಗಪ್ಪ ಖರೀದಿ ಮಾಡಿದ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಸರ್ವೆ.ನಂಬರ್.135/1 ರಲ್ಲಿ ನನಗೆ ಜಮೀನು ಇರುವುದಿಲ್ಲ. ಸರ್ವೆ.ನಂಬರ್.135/1 ಕ್ಕೆ ಹೊಂದಿಕೊಂಡು ನನಗೆ ಜಮೀನು ಇರುವುದಿಲ್ಲ.

3. ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ವಾದಿಗಳು ನಮ್ಮ ಗ್ರಾಮದವರು ಆಗಿರುವ ಕಾರಣ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಗಳ ಹೇಳಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.) ಓ. ಹೇ. ಕೇ. ಸರಿ. ಇದೆ.

ಸಹಿ/-
(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ